ಶ್ರೀ ಎನ್. ಚಿಕ್ಕೇಗೌಡ.—ಶಿವಮೊಗ್ಗ ತಾಲ್ಲೂಕ್‌ನಲ್ಲಿ 1961ನೇ ಜಾನುವಾರುಗಳ ಸೆನ್ಸಸ್ ಪ್ರಕಾರ 93,423 ಜಾನುವಾರುಗಳಿವೆ. ಮತ್ತು ಶಿವಮೊಗ್ಗ ತಾಲ್ಲೂಕ್‌ನಲ್ಲಿ ಕುಂಬ್ಸಿ, ಆಯನೂರು, ಹಾರಘಟ್ಟ, ಹುಳಿನೂರು ಪ್ರದೇಶಗಳಲ್ಲಿ ಪಶುವೈದ್ಯಶಾಲೆಗಳಿವೆ. ಈ ಕಾರಣದಿಂದ ಹಾರನಹಳ್ಳಿಯಲ್ಲಿ ಪಶುವೈದ್ಯ ಶಾಲೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಉತ್ತರ ಕೊಡಲಾಗಿದೆ.

ಶ್ರೀ ಎಸ್. ಎಂ. ಶೀರ್‌ನಾಳಿ ಚಂದ್ರಶೇಖರ್.—ಅಂತರವನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೀರೋ ಅಥವಾ ಜಾನುವಾರುಗಳ ಸಂಖ್ಯೆಯನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೀರೋ ?

ಶ್ರೀ ಎನ್. ಚಿಕ್ಕೇಗೌಡ.—ಎರಡನ್ನೂ ಪರಿಗಣನೆಗೆ ತೆಗೆದುಕೊಂಡು ತಮ್ಮ ಪ್ರಶ್ನೆಗೆ ಉತ್ತರ ಕೊಡಲಾಗಿದೆ.

ಶ್ರೀ ಕೆ. ಯಂಕಟಪ್ಪ.—ಪಶುವೈದ್ಯ ಶಾಲೆಗಳು ಇಲ್ಲದಿರುವ ಕಡೆಗಳಲ್ಲಿ ಪಶುವೈದ್ಯ ಶಾಲೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಮೂರು ಮುಖ್ಯವಾದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡಲಾಗುತ್ತದೆಂದು ಈಗಾಗಲೇ ಹೇಳಿದ್ದೇನೆ. ಇಡೀ ಮೈಸೂರು ಸಂಸ್ಥಾನದಲ್ಲಿ ನಮ್ಮ ಹಣಕಾಸಿನ ಪರಿಸ್ಥಿತಿಯಲ್ಲಿ ಈ ವರ್ಷದಲ್ಲಿ 40 ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡಬೇಕೆಂದು ಹೊರಟಿದ್ದೇವೆ. ಮತ್ತು, ಈಗ ಇರತಕ್ಕಂಥ ಪಶುವೈದ್ಯ ಶಾಲೆಗಳಲ್ಲಿ ಪ್ರತಿಕ 20 ನ್ನ ಅಪ್-ಗ್ರೇಡ್ ಮಾಡಬೇಕೆಂದಿದ್ದೇವೆ. ಅದರ ಪ್ರಕಾರ ಯಾವುದಕ್ಕೆ ಪ್ರಿಯಾರಿಟಿ ಬರುತ್ತದೆಯೆಂಬುದನ್ನು ಗಣನೆಗೆ ತೆಗೆದುಕೊಂಡು, ಒಂದು ಜಿಲ್ಲೆಗೆ ಎರಡು ಹೊಸ ಪಶುವೈದ್ಯ ಶಾಲೆಗಳನ್ನು ಮತ್ತು ಒಂದನ್ನು ಅಪ್‌ಗ್ರೇಡ್ ಮಾಡುವುದಕ್ಕೆ ಹಣವನ್ನು ಒದಗಿಸಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಜಾನುವಾರು ಸಂಖ್ಯೆ ಕಡಿಮೆ ಇದ್ದು ಮತ್ತು ವಿಸ್ತೀರ್ಣದ ದೃಷ್ಟಿಯಿಂದ ಒಂದು ಆಸ್ಪತ್ರೆಗೂ ಇನ್ನೊಂದು ಆಸ್ಪತ್ರೆಗೂ ಹತ್ತು ಹದಿನೈದು ಮೈಲಿಗಳ ಅಂತರ ಎದ್ದರೆ, ಅಂತಹ ಕಡೆಗಳಲ್ಲಿ ವಿಶೇಷವಾದ ಪರಿಸ್ಥಿತಿ ಎಂದು ಮನಗಂಡು ಪಶುವೈದ್ಯ ಶಾಲೆಯನ್ನು ಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಬಹಳ ಹಿಂದುಳಿದಿರತಕ್ಕಂಥ ಪ್ರದೇಶಗಳಲ್ಲಿ ಜಾನುವಾರುಗಳಿಗೆ ವೈದ್ಯಕೀಯ ಸೌಲಭ್ಯ ದೊರೆಯುವುದು ಕಷ್ಟವಾಗಿದ್ದರೆ, ಮತ್ತು ಪಶುವೈದ್ಯ ಶಾಲೆಗಳು ದೂರದ ಸ್ಥಳಗಳಲ್ಲಿದ್ದರೆ ಅಂಥದ್ದನ್ನು ಸಹ ಪರಿಗಣನೆಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಶೀರ್‌ನಾಳಿ ಚಂದ್ರಶೇಖರ್.— ಹಾರನಹಳ್ಳಿಯಲ್ಲಿ 20 ವರ್ಷದವರೆಗೆ ಜಾನುವಾರುಗಳಿರುವುದರಿಂದ 1973—74 ರಲ್ಲಿಯಾದರೂ ಒಂದು ಪಶುವೈದ್ಯ ಶಾಲೆಯನ್ನು ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಪರಿಶೀಲನೆಯಲ್ಲಾಗುತ್ತದೆ.

Uniform Retirement Age

71 Sri V. M. GHADI (Haliyal).—

Will the Minister for Education be pleased to state :—

a) whether the teachers in Bombay Karnatpk area are being retired age of 58 ;

(*b* the number of cases where extension has been given to teachers by the Deputy Director of Public Instruction in the Bombay-Karnatak area after the completion of 58 years of age as per G. P. Scheme in consonance of Government Order No. ED 55 SES 62, dated 16th October 1962 ;

(*c*) whether it is a fact that in some cases this facility has been denied in North Kanara District

(*d*) if so, the number of such cases ;

(*e*) whether the Government would extend the same benefit in case of those whom that facility was denied ?

Sri V. S. KOUJALGI (Minister of State for Youth Services) [(On behalf of Sri A. R. BADARINARAYAN (Minister for Education)]—

(*a*) The normal age of retirement is 58 years.

(*b*) 175 cases.

(*c*) No.

(*d*) Does not arise in view of reply to (*c*) above.

(*e*) Does not arise in view of reply to (*d*) above.

ಶ್ರೀ ವಿ.ಎಂ. ಘಾಡಿ.—ನನ್ನ ಎರಡನೆಯ ಪ್ರಶ್ನೆಗೆ ಉತ್ತರವಾಗಿ 175 ಪ್ರಕರಣಗಳು ಎಂದು ಹೇಳಿದ್ದೀರಿ. ಇದಕ್ಕೆ ಆಧಾರವೇನು ಎಂಬುದನ್ನು ಹೇಳುತ್ತೀರಾ ?

ಶ್ರೀ ವಿ. ಎಸ್. ಕೌಜಲಗಿ.—ಜಿ. ಪಿ. ಯೋಜನೆಯ ಮೇರೆಗೆ ಎಂದು ಉತ್ತರ ಕೊಡರಾಗಿದೆ.

ಶ್ರೀ ವಿ. ಎಂ. ಘಾಡಿ.—ಅದಕ್ಕೆ ಏನು ಆಧಾರ ಎಂದು ಕೇಳಬಹುದೇ ?

ಶ್ರೀ ವಿ. ಎಸ್. ಕೌಜಲಗಿ.—ಅದನ್ನು ಟೇಬಲ್‌ಮೇಲೆ ಇಡುತ್ತೇನೆ.

ಶ್ರೀ ವಿ. ಎಂ. ಘಾಡಿ.—ನನ್ನ ಕೊನೆಯ ಎರಡು ಪ್ರಶ್ನೆಗಳಿಗೆ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ. ಅನ್ಯಾಯವಾಗಿರತಕ್ಕಂಥ ಶಿಕ್ಷಕರ ಬಗ್ಗೆ ಒಂದು ಪಟ್ಟಿಯನ್ನು ಕೊಟ್ಟರೆ ಅವರಿಗೆ ಯೋಗ್ಯವಾದ ಪರಿಹಾರ ಕೊಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ವಿ. ಎಸ್. ಕೌಜಲಗಿ.—ಲಿಸ್ಟ್ ಕೊಟ್ಟರೆ ಸರ್ಕಾರವು ಅದನ್ನು ವಿಚಾರ ಮಾಡುತ್ತದೆ ಮತ್ತು ಯೋಗ್ಯ ಪರಿಹಾರ ಕೊಡುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—(೫) ಪ್ರಶ್ನೆಗೆ ಉತ್ತರವಾಗಿ ನಿಜವಲ್ಲ ಎಂದು ಹೇಳಿದ್ದೀರಿ. ಖಾಸಗೀ ಶಾಲೆಗಳನ್ನು ಸರ್ಕಾರದವರು ವಹಿಸಿಕೊಂಡ ಮೇಲೆ ಉಪಾಧ್ಯಾಯರುಗಳ ನಿವೃತ್ತಿ ವಯಸ್ಸಿನಲ್ಲಿ ಏರುಪೇರಾಗಿದೆ. ಈ ರೀತಿ ಏರುಪೇರಾಗಿರುವ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರೆ, ಎಲ್ಲರಿಗೂ ಒಂದೇ ರೀತಿಯಾದಂತಹ ಸೌಲಭ್ಯ ಸಿಗುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ವಿ. ಎಸ್. ಕೌಜಲಗಿ.—ಅದನ್ನು ಸರ್ಕಾರದ ಗಮನಕ್ಕೆ ತಂದರೆ ವಿಚಾರ ಮಾಡರಾಗುತ್ತದೆ.

School Buildings at Khasbag, Belgaum

112 Sri B. B. SAYANAK (Belgaum).—

Will the Minister for Education be pleased to state :—

(*a*) the number of students in Marathi Primary Boys' School No. 15 at Khasbag in Belgaum City Range ;

(*b*) the number of rooms in the said school ;